ನಂಗೊತ್ತಿಲ್ಲ' ಅಂತ ಸಿಡುಕಿದರೂ ನನ್ನ ತುಟಿಗಳಲ್ಲಿನ ನಗೆ ಅವನನ್ನು ತೀರಾ ನಿರಾಶೆಯ ಕೂಪಕ್ಕೆ ತಳ್ಳುವುದಿಲ್ಲ. ಇದರಿಂದಾಗಿ ಸ್ಫೂರ್ತಿಗೊಂಡವನಂತೆ ಮಾತಿಗಿಳಿಯುತ್ತಾನೆ. 'ನಮಗೆ ಗೊತ್ತಿಲ್ಲದೆ ಆಗಮಿಸಿ ಪುಟ್ಟ ಹೃದಯದಲ್ಲಿ ಸೆಟ್ಲ್ ಆಗಿಬಿಡುವ ಆಗಂತುಕ ಕಣ್ರಿ ಈ ಪ್ರೇಮ... ಫಾರ್ ಎಕ್ಸಾಂಪಲ್, ಕತ್ತಲೆ ಕಳೆದು ಬೆಳಕು ಹರಿಯೋದು, ನೀರು ಕುದ್ದು ಆವಿಯಾಗೋದು, ನೆಲದಲ್ಲಿ ಬಿದ್ದ ಬೀಜ ಮೊಳಕೆಯೊಡೆಯೋದು, ಮೊಗ್ಗು ಅರಳಿ ಹೂವಾಗೋದು, ಹೃದಯದಲ್ಲಿ ಪ್ರೇಮ ಚಿಗುರೊಡೆಯೋದು ಯಾವ ಗಳಿಗೆ, ಕ್ಷಣ ದಿನ ಅನ್ನೋದೇ ಗೊತ್ತಾಗದಿರುವಷ್ಟು ಸೂಕ್ಷ್ಮ ಸಂವೇದನೆ. ಯು ನೋ...' ವಿಶ್ಲೇಷಣೆಗೆ ಇಳಿಯುತ್ತಾನೆ. ಕಣ್ಣುಗಳಲ್ಲಿ ಕಣ್ಣಿಟ್ಟು ನನ್ನ ಹಸ್ತಗಳನ್ನು ಹಿಡಿದು ಮೆದುವಾಗಿ ಅಮುಕುತ್ತಾನೆ. ನಯವಾಗಿ ಬಿಡಿಸಿಕೊಳ್ಳುವೆ. ಇಂತಹ ಮೋಜಿನ ಮಾತು ಊಟ ಉಡುಗೊರೆಯಿಂದಾಗಿ ಅದೆಂದೋ ನನ್ನ ಜೀವನದಲ್ಲಿ ಬತ್ತಿಹೋಗಿದ್ದ ಸಂತಸದ ಝರಿ ಮರುಹುಟ್ಟು ಪಡೆಯುತ್ತದೆ. ಇದೇ ಚೈತ್ರದ ದಿನಗಳಲ್ಲಿ ಶ್ರೀಲಕ್ಷ್ಮಿಗೆ ಬಡ್ತಿ ದೊರೆತು ಬೇರೆ ಬ್ರಾಂಚ್‌ಗೆ ಜಿಗಿಯುತ್ತಾಳೆ. ಅವಳ ಪ್ರಮೋಶನ್ ಬಗ್ಗೆ ಕಿಶೋರನೇ ಹೆಚ್ಚು ಆಸಕ್ತಿ ತಗೊಂಡನೆಂಬ ಚರ್ಚೆ ಲಂಚ್ ಅವರ್ಸ್‌ನ ಒಂದು ಭಾಗವಾಗುತ್ತದೆ. ಪೀಡೆ ತೊಲಗಿತು ಅಂದುಕೊಳ್ಳುವೆ. ಒಮ್ಮೆ ಪೇಪರ್ಸ್ ಸಹಿ ಮಾಡುವಾಗ ನಾನೇ ಅವಳನ್ನು ಇಲ್ಲಿಂದ ಎತ್ತಂಗಡಿ ಮಾಡಿಸಿದ್ದೂರೀ. ನಮ್ಮಿಬ್ಬರ ಮೇಲೆ ಅವಳ ಕಣ್ಣಾಗವಲಿತ್ತು' ಅನ್ನುವ. 'ಸೊ ಈ ಅಪರಾಧಕ್ಕಾಗಿ ನೀವು ನೀಡಿದ ಶಿಕ್ಷೆ

